## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,

## ಶಹಾಪೂರ

CW 1 PW-5

ಸಿ.ಸಿ.ನಂ.850/2025

| | |
|---|---|
| ಹೆಸರು | ಃ ಮಹಾಂತೇಶ್ |
| ತಂದೆ ಹೆಸರು | ಃ ಗುರುಭೀಮ್ ಪಾಟೀಲ್ |
| ವಯಸ್ಸು | ಃ 38 ವರ್ಷ |
| ಉದ್ಯೋಗ | ಃ PSI ಮಾದನ ಹಿಪ್ಪರಗಿ |
| ವಾಸ | ಃ ಮಾದನ ಹಿಪ್ಪರಗಿ |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 25-05-2026.**

**ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ**

ನಾನು ದಿಃ 26-07-2024 ರಿಂದ 17-09-2025 ರವರೆಗೆ ಭೀಮರಾಯನಗುಡಿ ಪೊಲೀಸ್ ಠಾಣೆಯಲ್ಲಿ PSI ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 05-07-2025 ರಂದು ಸಾಯಂಕಾಲ 07.15 ರ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ನನಗೆ ಶಿರವಾಳ ಗ್ರಾಮದ ಮಸಿದಿ ಎದುರಿಗೆ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದಾಗಿ ಭಾತ್ಮಿ ಬಂದಿದ್ದು ನಾನು ಅದನ್ನು ಚಾಸಾ 4 ರಿಂದ 6 ರವರಿಗೆ ತಿಳಿಸಿ. ನಂತರ ನಾನು, ಚಾಸಾ2 ಮತ್ತು 3 ರವರನ್ನು ಠಾಣೆಗೆ ಕರೆಸಿ ನಾನು ಅವರಿಗೆ ನನಗೆ ಬಂದ ಬಾತ್ಮಿಯನ್ನು ತಿಳಿಸಿ ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿರುತ್ತಾರೆ . ನಂತರ ನಾವೆಲ್ಲರೂ ನಮ್ಮ ಠಾಣಾ ವಾಹನದಲ್ಲಿ ಸಾಯಂಕಾಲ 7.25 ಕ್ಕೆ ಶಿರವಾಳ ಗ್ರಾಮ ಬಿಟ್ಟಿರುತ್ತೇವೆ. ಸದರಿ ಸ್ಥಳಕ್ಕೆ ನಾವು ಸಾಯಂಕಾಲ 7.55 ಕ್ಕೆ ತಲುಪಿರುತ್ತೇವೆ. ನಂತರ ನಾವು ಜೀಪಿನಿಂದ ಇಳಿದು ಸದರಿ ಮಸಿದಿ ಹತ್ತಿರ ನಿಂತು ನೋಡಿದಾಗ ಆರೋಪಿಯು ಮದ್ಯವನ್ನು ಮಾರಾಟ ಮಾಡುತ್ತಿದ್ದರು. ನಾನು ಸದರಿ ಪಂಚರ ಸಮಕ್ಷಮ ದಾಳಿ ಮಾಡಿ ಮದ್ಯ ಮಾರಾಟ ಮಾಡುವುದರ ಬಗ್ಗೆ ಪರವಾನಿಗೆಯನ್ನು ಕೇಳಿದಾಗ ಅವರು ಇರುವುದಿಲ್ಲ ಎಂದು ಹೇಳಿರುತ್ತಾರೆ. ಆರೋಪಿಯಿಂದ ನಾನು 32 OC ವಿಸ್ಕಿಯ ಪೌಚಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ದಾಳಿಯನ್ನು ಮಾಡಿದಾಗ ಅಲ್ಲಿದ್ದ ಸಾರ್ವಜನಿಕರು ಅಲ್ಲಿಂದ ಓಡಿ ಹೋಗಿರುತ್ತಾರೆ. ಆರೋಪಿಯು

ಸಿಕ್ಕಿರುತ್ತಾರೆ. ಪಂಚನಾಮೆಯನ್ನು ರಾತ್ರಿ 8.00 ರಿಂದ 09.00 ಗಂಟೆಯವರೆಗೆ ಮಾಡಿರುತ್ತೇನೆ. ಸದರಿ ಪೌಚ್ ಗಳಿಂದ 1 ನ್ನು FSL ಗಾಗಿ ಪ್ರತೇಕವಾಗಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ಆರೋಪಿಯನ್ನು ಪಂಚನಾಮೆ ಹಾಗೂ ಮುದ್ದೆ ಮಾಲಿನೊಂದಿಗೆ ಚಾಸಾ 8 ರವರ ಸಮಕ್ಷಮ ಹಾಜರು ಪಡಿಸಿ ನಿಪಿ.2 ರಂತೆ ವರದಿಯನ್ನು ಸಲ್ಲಿಸಿರುತ್ತೇನೆ. ನಿಪಿ.3 ರ ಮೇಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಈಗ ನಿಪಿ.3(a) ಎಂದು ಗುರುತಿಸಲಾಯಿತು. ಸಮಯದ ಅಭಾವದ ಕಾರಣ ಸದರಿ ದಾಳಿಯನ್ನು ಮಾಡಲು ಸಂಬಂಧ ಪಟ್ಟ ನ್ಯಾಯಾಲಯದಿಂದ ಅನುವುತಿಯನ್ನು ಕೋರಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ . ಸಾಕ್ಷಿಯು ನಿಪಿ.1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ.1(ಸಿ) ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲು ಆರೋಪಿತರ ಪರವಾಗಿ ಶ್ರೀ. RMH ಮಾನ್ಯ ವಕೀಲರಿಂದಃ</u>**

ನಾವು ಘಟನಾ ಸ್ತಳಕೆ ಹೋದಾಗ ಸಾಯಂಕಾಲ 07.55 ನಿಮಿಷ ಅಗಿತ್ತು . ಸ್ತಳದಲ್ಲಿ ಸುಮಾರು 8-9 ಜನ ಹಾಜರಿದ್ದರು . ನಾನು ಸದರಿ ವ್ಯಕ್ತಿಗಳನ್ನು ಸುಮಾರು 50 ಪೀಟ್ ಅಂತರದಿಂದ ನೋಡಿರುತ್ತೇನೆ . ಗುನ್ನಾ ಸ್ತಳವು ಶಹಾಪೂರದಿಂದ ಶಿರವಾಳದ ಊರಿನ ಒಳಗೆ ಹೋಗುವ ರಸ್ತೆ ಆಗಿರುತ್ತದೆ ಎಂದರೆ ಸರಿ. ನಾನು ಸದರಿ 8-9 ಜನರನ್ನು ಹಿಡಿಯಲು ಹೋದಾಗ ಅವರು ಓಡಿ ಹೋಗಿರುತ್ತಾರೆ ಹಾಗೂ ಆರೋಪಿ ಮಾತ್ರ ಸಿಕ್ಕಿರುತ್ತಾರೆ . ಆರೋಪಿಯು ತಮ್ಮ ಅಂಗಡಿಯಲ್ಲಿ ಇದ್ದ ಕಾರಣ ಅವರು ಓಡಿ ಹೋಗಿರುವುದಿಲ್ಲ. ಆರೋಪಿಯ ಸದರಿ ಅಂಗಡಿಯು ಸಾರ್ವಜನಿಕ ಸ್ತಳದಲ್ಲಿ ಇರುತ್ತದೆ. ಗುನ್ನಾ ಸ್ತಳದಲ್ಲಿ ಹಿಂದುಗಡೆ ಒಂದು ಅಂಗಡಿ ಇದ್ದು ಆರೋಪಿಯು ಮದ್ಯವನ್ನು ಅಂಗಡಿಯ ಮುಂಭಾಗದಲ್ಲಿ ಮಾರಾಟ ಮಾಡುತ್ತಿದ್ದರು. ಆರೋಪಿಯು ಸದರಿ ಪೌಚ್ ಗಳನ್ನು ಒಂದು ಪ್ಲಾಸ್ಟಿಕ್ ಬ್ಯಾಗಿನಲ್ಲಿ ಹಾಕಿ ಕೈಯಲ್ಲಿ ಹಿಡಿದುಕೊಂಡಿದ್ದರು. ಸದರಿ ದಿನದಂದು ಸದರಿ ಅಂಗಡಿ ತೆಗೆದಿದ್ದು ನಾನು ಅದರ ಒಳಗೆ ಹೋಗಿರುವುದಿಲ್ಲ. ನಮ್ಮ ಠಾಣೆಯಿಂದ ಘಟನಾ ಸ್ತಳಕ್ಕೆ ಹೋಗಲು 25 ನಿಮಿಷ ಬೇಕಾಗುತ್ತದೆ. ಸದರಿ ಓಡಿ ಹೋಗುತ್ತಿದ್ದ ವ್ಯಕ್ತಿಗಳನ್ನು ನಾನು ಹಿಡಿಯಲು ಪ್ರಯತ್ನಿಸಿರುವುದಿಲ್ಲ. ನಾನು ಸದರಿ ಪೌಚ್ ಗಳ ಕ್ರಮ ಸಂಖ್ಯೆಯನ್ನು ಗುರುತಿಸಿಕೊಂಡಿರುವುದಿಲ್ಲ. ಸದರಿ ಪಂಚನಾಮೆಯನ್ನು

ಮಾಡುವ ಸಂದರ್ಭದಲ್ಲಿ ನಾನು ಪೋಟೋವನ್ನು ತೆಗೆಸಿರುವುದಿಲ್ಲ ಹಾಗೂ ವಿಡೀಯೋವನ್ನು ಮಾಡಿಕೊಂಡಿರುವುದಿಲ್ಲ. ನಾನು ಸದರಿ ದಿನದಂದು ಆರೋಪಿಯಿಂದ ಯಾವುದೇ ಹಣವನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ. ನಾನು ಚಾಸಾ 2 ಮತ್ತು 3 ರವರಿಗೆ ಪಂಚರಾಗಲು ಯಾವುದೇ ನೋಟೀಸ್ ನ್ನು ಕೊಟ್ಟಿರುವುದಿಲ್ಲ. ನನಗೆ ಸದರಿ ದಿನದಂದು ಯಾವುದೇ ಬಾತ್ಮಿ ಬಂದಿರುವುದಿಲ್ಲ, ನಾನು ಗುನ್ಹಾ ಸ್ತಳಕ್ಕೆ ಹೋಗಿ ಆರೋಪಿಯಿಂದ ಯಾವುದೇ ಸದರಿ ಪೌಚುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ ಹಾಗೂ ಪಂಚರ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ. ಹಾಗೂ ಮುದ್ದೆಮಾಲು ಒಂದನ್ನು FSL ಗಾಗಿ ಪ್ರತೇಕವಾಗಿ ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಗುನ್ಹೆ ಯನ್ನು ಮಾಡದಿದ್ದರು ಕೂಡ ನಮ್ಮ ಠಾಣಾ ಅಂಕಿಅಂಶಗಳಿಗೊಸ್ಕರ ಅವರ ವಿರುದ್ಧ ಸುಳ್ಳಾದ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ . ನಮ್ಮ ಠಾಣಾ ಎಲ್ಲಾ ಪ್ರಕರಣಗಳಲ್ಲಿ ಚಾಸಾ 2 ಮತ್ತು 3 ರವರು ಪಂಚರಾಗಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ . ಆರೋಪಿಗೂ ಹಾಗೂ ಮುದ್ದೆಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆಃ-ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.